ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

## ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

**ವಿಷಯ:** ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2368/2011 ಮತ್ತು ಸಂಬಂಧಿಸಿದ ಸಿವಿಲ್ ಅಪೀಲುಗಳಲ್ಲಿ ನೀಡಿರುವ ದಿನಾಂಕ: 09-02-2017 ರ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ಮಂಡಳಿಯಲ್ಲಿ ದಿನಾಂಕ: 06-09-2017 ರಂದು ಪ್ರಕಟಿಸಲಾದ ಅಧಿಕಾರಿ/ನೌಕರರ ತಾತ್ಕಾಲಿಕ ಸೇವಾ ಜೇಷ್ಟತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ದಿನಾಂಕ: 06-09-2017 ರಂದು ಪ್ರಕಟಿಸಲಾದ ಮಂಡಳಿಯ ಎಲ್ಲಾ ಅಧಿಕಾರಿ/ನೌಕರರ ತಾತ್ಕಾಲಿಕ ಸೇವಾ ಜೇಷ್ಟತಾ ಪಟ್ಟಿಗಳು.
2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಗಳ ನೌಕರರುಗಳ ಕ್ಷೇಮಾಭಿವೃದ್ಧಿ ಸಂಘ (ರಿ) ಇವರ ಮನವಿ ಪತ್ರ ದಿನಾಂಕ: 21-09-2017.
3. ಮಂಡಳಿಯ ಪರಿಸರ ಅಧಿಕಾರಿಗಳಾದ ಶ್ರೀ ಪಿ. ನಿರಂಜನ್ ಹಾಗೂ ಶ್ರೀ ವಿಜಯ್ ಕುಮಾರ್ ಕಡಕಬಾವಿ ಇವರುಗಳ ಮನವಿ ಪತ್ರಗಳ ದಿನಾಂಕ: 21-09-2017

ಅಅಅಅಅ

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2368/2011 ಮತ್ತು ಸಂಬಂಧಿಸಿದ ಸಿವಿಲ್ ಅಪೀಲುಗಳಲ್ಲಿ ನೀಡಿರುವ ದಿನಾಂಕ: 09-02-2017 ರ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ದಿನಾಂಕ: 06-09-2017 ರಂದು ಎಲ್ಲಾ ವರ್ಗದ ಅಧಿಕಾರಿ/ನೌಕರರ ತಾತ್ಕಾಲಿಕ ಸೇವಾ ಜೇಷ್ಟತಾ ಪಟ್ಟಿಗಳನ್ನು ಪ್ರಕಟಿಸಿ ಭಾದಿತ ಅಧಿಕಾರಿ/ನೌಕರರಿಂದ ಆಕ್ಷೇಪಣೆಗಳನ್ನು ಅಧಿಸೂಚನೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸಲ್ಲಿಸಲು ಅವಕಾಶವನ್ನು ನೀಡಲಾಗಿರುತ್ತದೆ.

ಆದರೆ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಗಳ ನೌಕರರುಗಳ ಕ್ಷೇಮಾಭಿವೃದ್ಧಿ ಸಂಘ (ರಿ) ಇವರ ಉಲ್ಲೇಖಿತ (1) ರ ಮನವಿ ಪತ್ರದಲ್ಲಿ ಹಾಗೂ ಮಂಡಳಿಯ ಪರಿಸರ ಅಧಿಕಾರಿಗಳಾದ ಶ್ರೀ ಪಿ. ನಿರಂಜನ್ ಹಾಗೂ ಶ್ರೀ ವಿಜಯ್ ಕುಮಾರ್ ಕಡಕಬಾವಿ ಇವರುಗಳ ಉಲ್ಲೇಖಿತ (2) ರ ಮನವಿ ಪತ್ರಗಳಲ್ಲಿ ಮಂಡಳಿಯು ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ದಿನಾಂಕ: 09-02-2017 ರನ್ವಯ ದಿನಾಂಕ: 06-09-2017 ರಂದು ಅಧಿಕಾರಿ/ನೌಕರರ ತಾತ್ಕಾಲಿಕ ಜೇಷ್ಟತಾ ಪಟ್ಟಿಗಳನ್ನು ಪ್ರಕಟಿಸಿ ಭಾದಿತ ಅಧಿಕಾರಿ/ನೌಕರರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿದ್ದು, ಮಂಡಳಿಯು ಸದರಿ ಜೇಷ್ಟತಾ ಪಟ್ಟಿಗಳನ್ನು ದಿನಾಂಕ: 06-09-2017 ರಂದು ಪ್ರಕಟಿಸಿ , ದಿನಾಂಕ: 13-09-2017 ರಂದು ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಿ, ದಿನಾಂಕ: 13-09-2017 ರಂದು ಎಲ್ಲಾ ಅಧಿಕಾರಿ/ನೌಕರರಿಗೆ ಇ-ಮೇಲ್ ಮೂಲಕ ಮಾಹಿತಿಯನ್ನು ರವಾನಿಸಿದ್ದು, ಭಾದಿತ ಅಧಿಕಾರಿ/ನೌಕರರಿಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅತಿ ಕಡಿಮೆ ಅವಧಿ ದೊರಕಿದ್ದು, ದಿನಾಂಕ: 13-09-2017 ರಿಂದ ಅನ್ವಯವಾಗುವಂತೆ ಮತ್ತೆ 1 ತಿಂಗಳ ಅವಧಿಗೆ ಅವಧಿಯನ್ನು ವಿಸ್ತರಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಬೇಕೆಂದು ಕೋರಿರುತ್ತಾರೆ, ಈ ಹಿನ್ನೆಲೆಯಲ್ಲಿ ಉಲ್ಲೇಖಿತ (1) ಮತ್ತು (2) ರಲ್ಲಿನ ಮನವಿ ಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

.........2

ಸಂಖ್ಯೆ: ಮಾನಿಮ 26 ಆಡಎ 2017/ 333                    ದಿನಾಂಕ: 04 OCT 2017

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖಿತ (1) ರಲ್ಲಿ ಪ್ರಕಟಿಸಲಾದ ಮಂಡಳಿಯ ಎಲ್ಲಾ ವರ್ಗದ ಅಧಿಕಾರಿ/ನೌಕರರ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಗಳಿಗೆ ಬಾಧಿತ ಅಧಿಕಾರಿ/ನೌಕರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅವಧಿಯನ್ನು ದಿನಾಂಕ: 07-10-2017 ರ ಸಂಜೆ 5 ಗಂಟೆಯವರೆಗೆ ವಿಸ್ತರಿಸಲಾಗಿದೆ.

4/10/17

ಅಧ್ಯಕ್ಷರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪ್ರತಿಗಳು:

1. ಸರ್ಕಾರದ ಕಾರ್ಯದರ್ಶಿಯವರು, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಇವರ ಮಾಹಿತಿಗಾಗಿ.'
2. ಮಾನ್ಯ ಅಧ್ಯಕ್ಷರ ಹಾಗೂ ಸದಸ್ಯ ಕಾರ್ಯದರ್ಶಿಯವರ ಆಪ್ತ ಸಹಾಯಕರ ಶಾಖೆಗೆ, ಅವರ ಗಮನಕ್ಕೆ ತರುವ ಸಲುವಾಗಿ.
3. ಮಂಡಳಿಯ ಮುಖ್ಯ ಪರಿಸರ ಅಧಿಕಾರಿಗಳು ಹಾಗೂ ಮುಖ್ಯ ವೈಜ್ಞಾನಿಕ ಅಧಿಕಾರಿಗಳ ಮಾಹಿತಿಗಾಗಿ.
4. ಮಂಡಳಿಯ ಎಲ್ಲಾ ಹಿರಿಯ ಪರಿಸರ ಅಧಿಕಾರಿಗಳ ಮಾಹಿತಿಗಾಗಿ.
5. ಎಲ್ಲಾ ಪ್ರಾದೇಶಿಕ ಕಚೇರಿಗಳ ಮುಖ್ಯಸ್ಥರ ಮಾಹಿತಿಗಾಗಿ ಹಾಗೂ ತಮ್ಮ ಕಚೇರಿಯಲ್ಲಿರುವ ಸಿಬ್ಬಂದಿಯ ಗಮನಕ್ಕೆ ಕಡ್ಡಾಯವಾಗಿ ತರುವ ಸಲುವಾಗಿ.
6. ಎಲ್ಲಾ ಪ್ರಾದೇಶಿಕ ಪ್ರಯೋಗಾಲಯಗಳ ಮುಖ್ಯಸ್ಥರ ಮಾಹಿತಿಗಾಗಿ ಹಾಗೂ ತಮ್ಮ ಕಚೇರಿಯಲ್ಲಿರುವ ಸಿಬ್ಬಂದಿಯ ಗಮನಕ್ಕೆ ಕಡ್ಡಾಯವಾಗಿ ತರುವ ಸಲುವಾಗಿ.
7. ಕೇಂದ್ರ ಕಚೇರಿಯ ಎಲ್ಲಾ ಅಧಿಕಾರಿ/ನೌಕರರ ಮಾಹಿತಿಗಾಗಿ.
8. ಪರಿಸರ ಅಧಿಕಾರಿ ನಿಗಮಿತ ಕೋಶ ಇವರ ಮಾಹಿತಿಗಾಗಿ ಹಾಗೂ ಕೂಡಲೇ ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ.
9. ಹೆಚ್ಚುವರಿ ಪ್ರತಿ/ಶಾಖಾ ರಕ್ಷಿತ ಕಡತ/ ಸೂಚನಾ ಫಲಕ/ಇತರೇ.